# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು, ಹುಲ್ಲೇಕೆರೆ ಗ್ರಾಮ ಪಂಚಾಯಿತಿ ಸದಸ್ಯರುಗಳಾದ ಶ್ರೀ ಸಿದ್ದರಾಮಯ್ಯ ಹೆಚ್.ಆರ್. ಶ್ರೀಮತಿ ಶೋಭಾ ವಿ. ಶ್ರೀಮತಿ ಸರಳಾ, ಶ್ರೀಮತಿ ಕೆಂಪದೇವಮ್ಮ, ಶ್ರೀ ಯಶೋಧ, ಶ್ರೀ ಬಾಬು ಹಾಗೂ ಶ್ರೀ ಹಾಲೇಶ್ ಎಂ. ರವರುಗಳ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು – ಆದೇಶ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 1135 ಗ್ರಾಪಂಅ 2018, ದಿನಾಂಕ: 02.02.2019.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ರವರ ಪತ್ರ ಸಂಖ್ಯೆ: ಗ್ರಾಅಪ 202 ಗ್ರಾಪಂಅ 2019, ದಿನಾಂಕ:26.04.2019.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ತುಮಕೂರು ಜಿಲ್ಲೆ ರವರು ಪತ್ರ ಸಂಖ್ಯೆ:ತುಜಿಪಂ/ಅಭಿ/ವಿವ-3/ಅವ್ಯವಹಾರ/390/18-19, ದಿನಾಂಕ:29.01.2019.
4. ಪ್ರಾದೇಶಿಕರ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರ ಪತ್ರ ಸಂಖ್ಯೆ: ಪ್ರಾಆಕ/ಅಭಿವೃದ್ಧಿ/ಸಿಆರ್/27/2019-20, ದಿನಾಂಕ:21.01.2020.

**ಪ್ರಸ್ತಾವನೆ:**

ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು, ಹುಲ್ಲೇಕೆರೆ ಗ್ರಾಮ ಪಂಚಾಯಿತಿ ಸದಸ್ಯರುಗಳಾದ ಶ್ರೀ ಸಿದ್ದರಾಮಯ್ಯ ಹೆಚ್.ಆರ್. ಶ್ರೀಮತಿ ಶೋಭಾ ವಿ. ಶ್ರೀಮತಿ ಸರಳಾ, ಶ್ರೀಮತಿ ಕೆಂಪದೇವಮ್ಮ, ಶ್ರೀ ಯಶೋಧ, ಶ್ರೀ ಬಾಬು ಹಾಗೂ ಶ್ರೀ ಹಾಲೇಶ್ ಎಂ. ರವರುಗಳು ಹುಲ್ಲೇಕೆರೆ ಗ್ರಾಮ ಪಂಚಾಯಿತಿಯಲ್ಲಿ ಮಾಡಿರುವ ಅವ್ಯವಹಾರಗಳ ಬಗ್ಗೆ ಉಲ್ಲೇಖ (1) ಮತ್ತು (2) ರ ಆದೇಶಗಳ ಸೂಚನೆಯಂತೆ ವಿಚಾರಣೆ ನಡೆಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ತುಮಕೂರು ಜಿಲ್ಲೆ ರವರಿಗೆ ನಿರ್ದೇಶನ ನೀಡಲಾಗಿತ್ತು. ಅದರಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ತುಮಕೂರು ಜಿಲ್ಲೆ ರವರು ಆರೋಪಿತ ಸದಸ್ಯರ ವಿರುದ್ಧ ಇದಂತಹ ಆರೋಪಗಳ ಬಗ್ಗೆ ವಿಚಾರಣೆ ಮಾಡಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ಅಧಿನಿಯಮ 1993 ರ ಪ್ರಕರಣ 43(ಎ) ರನ್ವಯ ಕ್ರಮ ಜರುಗಿಸುವಂತೆ ಮೇಲೆ ಓದಲಾದ (3) ರ ಪತ್ರದಲ್ಲಿ ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು, ಹುಲ್ಲೇಕೆರೆ ಗ್ರಾಮ ಪಂಚಾಯಿತಿಯ ಸದಸ್ಯರುಗಳಾದ ಶ್ರೀ ಸಿದ್ದರಾಮಯ್ಯ ಹೆಚ್.ಆರ್. ಶ್ರೀಮತಿ ಶೋಭಾ ವಿ., ಶ್ರೀಮತಿ ಸರಳಾ, ಶ್ರೀಮತಿ ಕೆಂಪದೇವಮ್ಮ, ಶ್ರೀಮತಿ ಯಶೋಧ, ಶ್ರೀಬಾಬು ಹಾಗೂ ಶ್ರೀ ಹಾಲೇಶ್ ಎಂ. ರವರುಗಳು 13 ಮತ್ತು 14ನೇ ಸಾಲಿನ ಹಣಕಾಸು ಯೋಜನೆ ಮತ್ತು ವರ್ಗ-2 ರಲ್ಲಿನ ಅನುದಾನವು ಗ್ರಾಮ ಪಂಚಾಯಿತಿ ಖಾತೆಗಳಿಂದ ಗ್ರಾಮ ಪಂಚಾಯಿತಿ ಸದಸ್ಯರುಗಳು ಮತ್ತು ಅವರ ಸಂಬಂಧಿಕರ ಹೆಸರಿನ ಖಾತೆಗಳಿಗೆ ಜಮಾ ಆಗಿದ್ದು, ಇವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ತುಮಕೂರು ಜಿಲ್ಲೆ ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ (4) ರಲ್ಲಿ ಓದಲಾದ ಪತ್ರದಲ್ಲಿ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಹಾಗೂ ವಿಚಾರಣಾಧಿಕಾರಿಗಳು ಇವರು ವಿಚಾರಣಾ ವರದಿಯಲ್ಲಿ ಸದರಿ ಆರೋಪದ ವಿರುದ್ಧ ಮೇಲ್ಕಂಡ ಗ್ರಾಮ ಪಂಚಾಯಿತಿ ಸದಸ್ಯರುಗಳಿಗೆ ದಿನಾಂಕ:27.05.2019 ರಂದು ಕಾರಣ ಕೇಳುವ ನೋಟೀಸ್ಸ್ ಜಾರಿ ಮಾಡಿ ಸಮಜಾಯಿಷಿ ನೀಡುವಂತೆ ತಿಳಿಸಲಾಗಿರುತ್ತದೆ. ಮುಂದುವರೆದು ದಿನಾಂಕ: 13.09.2019, 20.09.2019, 26.09.2019, 14.10.2019, 18.10.2019 ಹಾಗೂ 21.10.2019 ರಂದು ವಿಚಾರಣೆ ಮಾಡಲಾಗಿರುತ್ತದೆ. ವಿಚಾರಣೆ ಸಮಯದಲ್ಲಿ ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು, ಹುಲ್ಲೇಕೆರೆ ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷರಾದ ಜಿ. ಸುಮಾ ರವರು ಅಧ್ಯಕ್ಷರಾಗಿದ್ದ ಸಮಯದಲ್ಲಿ ಹಲವಾರು ದುರುಪಯೋಗಗಳನ್ನು ಮಾಡಿರುವುದರ ಬಗ್ಗೆ ನಾವುಗಳು ಮೇಲಾಧಿಕಾರಿಗಳಿಗೆ ದೂರು ಸಲ್ಲಿಸಿ, ಅವರ ವಿರುದ್ಧ ಅವಿಶ್ವಾಸ ನಿರ್ಣಯವನ್ನು ತಂದು ಅವರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿ, ಆ ಸ್ಥಾನಕ್ಕೆ ಬೇರೆ ಅಧ್ಯಕ್ಷರನ್ನು ಆಯ್ಕೆ ಮಾಡಿಸಿರುತ್ತೇವೆ. ಈ ರೀತಿ ಜಿ. ಸುಮಾ ರವರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿರುವುದರಿಂದ ದೂರುದಾರರಾದ ಶ್ರೀ ಹೆಚ್.ಬಿ. ಶಿವಕುಮಾರ್ ರವರ ಮುಖಾಂತರ ನಮ್ಮಗಳ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿರುತ್ತಾರೆ ಎಂದು ಲಿಖಿತ ಹೇಳಿಕೆ ನೀಡಿರುತ್ತಾರೆ.

..2

ವಾದಿ ಮತ್ತು ಪ್ರತಿವಾದಿಗಳ ಹೇಳಿಕೆಗಳು ಮತ್ತು ಅವರು ಸಲ್ಲಿಸಿರುವ ಸಮಜಾಯಿಷಿಗಳನ್ನು ಪರಿಶೀಲಿಸಲಾಗಿ, ಆರೋಪಗಳನ್ನು ಅಲ್ಲಗೆಳೆಯುವಂತ ದಾಖಲೆಗಳನ್ನು ಸಲ್ಲಿಸದಿರುವುದರಿಂದ ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು, ಹುಲ್ಲೇಕೆರೆ ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀ ಸಿದ್ದರಾಮಯ್ಯ ಹೆಚ್.ಆರ್. ಶ್ರೀಮತಿ ಶೋಭಾ ವಿ. ಶ್ರೀಮತಿ ಸರಳಾ, ಶ್ರೀಮತಿ ಕೆಂಪದೇವಮ್ಮ, ಶ್ರೀಮತಿ ಯಶೋಧ, ಶ್ರೀ ಬಾಬು ಹಾಗೂ ಶ್ರೀ ಹಾಲೇಶ್ ಎಂ. ರವರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಕಲಂ 43(ಎ) ರನ್ವಯ ಸದಸ್ಯತ್ವದಿಂದ ತೆಗೆದು ಹಾಕಬಹುದುದೆಂದು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪರಿಶೀಲಿಸಲಾಗಿ, ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು, ಹುಲ್ಲೇಕೆರೆ ಗ್ರಾಮ ಪಂಚಾಯಿತಿ ಸದಸ್ಯರುಗಳಾದ ಶ್ರೀ ಸಿದ್ದರಾಮಯ್ಯ ಹೆಚ್.ಆರ್. ಶ್ರೀಮತಿ ಶೋಭಾ ವಿ. ಶ್ರೀಮತಿ ಸರಳಾ, ಶ್ರೀಮತಿ ಕೆಂಪದೇವಮ್ಮ, ಶ್ರೀ ಯಶೋಧ, ಶ್ರೀ ಬಾಬು ಹಾಗೂ ಶ್ರೀ ಹಾಲೇಶ್ ಎಂ.ಇವರು ಅನುದಾನ ಬಳಕೆಯಲ್ಲಿ ಕರ್ತವ್ಯ ಲೋಪ, ಅವ್ಯವಹಾರದ ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಕಲಂ 43(ಎ) ರನ್ವಯ ಕ್ರಮ ಜರುಗಿಸಲು ಹಾಗೂ ಸದರಿ ಅಧಿನಿಯಮದ ಪ್ರಕರಣ 157(2) ಮತ್ತು 246(8) ರಡಿ ದುರುಪಯೋಗ ಪಡಿಸಿಕೊಂಡಿರುವ ಮೊತ್ತವನ್ನು ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಸಂಬಂಧಿಸಿದವರಿಂದ ಭೂ ಕಂದಾಯ ಬಾಕಿಯೆಂದು ವಸೂಲಿ ಮಾಡಲು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ತುರುವೇಕೆರೆ, ತುಮಕೂರು ಜಿಲ್ಲೆ ರವರಿಗೆ ಸೂಚಿಸಲು ಸರ್ಕಾರವು ತೀರ್ಮಾನಿಸಿದೆ.

ಅದರಂತೆ, ಈ ಕೆಳಕಂಡ ಆದೇಶ

**<u>ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/105/ಗ್ರಾಪಂಅ/2020</u>**

**<u>ಬೆಂಗಳೂರು, ದಿನಾಂಕ:25-02-2020.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು, ಹುಲ್ಲೇಕೆರೆ ಗ್ರಾಮ ಪಂಚಾಯಿತಿ ಸದಸ್ಯರುಗಳಾದ ಶ್ರೀ ಸಿದ್ದರಾಮಯ್ಯ ಹೆಚ್.ಆರ್. ಶ್ರೀಮತಿ ಶೋಭಾ ವಿ. ಶ್ರೀಮತಿ ಸರಳಾ, ಶ್ರೀಮತಿ ಕೆಂಪದೇವಮ್ಮ, ಶ್ರೀ ಯಶೋಧ, ಶ್ರೀ ಬಾಬು ಹಾಗೂ ಶ್ರೀ ಹಾಲೇಶ್ ಎಂ. ರವರ ವಿರುದ್ಧದ ಆರೋಪಗಳು ಸಾಬೀತಾಗಿರುವುದರಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರನ್ವಯ ಸದರಿ ಗ್ರಾಮ ಪಂಚಾಯತ್‌ನ ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿ ಹಾಗೂ ಸದರಿ ಅಧಿನಿಯಮದ ಪ್ರಕರಣ 157(2) ಮತ್ತು 246(8) ರಡಿ ದುರುಪಯೋಗ ಪಡಿಸಿಕೊಂಡಿರುವ ಮೊತ್ತವನ್ನು ಕ್ರಿಮಿನಲ್ ಮೊಕದ್ದಮೆ ದಾಖಲಿಸಿ ಸಂಬಂಧಿಸಿದವರಿಂದ ಭೂ ಕಂದಾಯ ಬಾಕಿಯೆಂದು ವಸೂಲಿ ಮಾಡಲು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ತುರುವೇಕೆರೆ, ತುಮಕೂರು ಜಿಲ್ಲೆ ರವರಿಗೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

B. Naveenkumar 25/02/2020.
(ನವೀನ್ ಕುಮಾರ್ ಬಿ.)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ.)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

25.2.2020

**<u>ಗೆ:</u>**

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ತುಮಕೂರು ಜಿಲ್ಲೆ.
2) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ತುರುವೇಕೆರೆ, ತುಮಕೂರು ಜಿಲ್ಲೆ.

..3

3) ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹುಲ್ಲೇಕೆರೆ ಗ್ರಾಮ ಪಂಚಾಯಿತಿ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ.
4) ಸಂಬಂಧಿಸಿದವರಿಗೆ (ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ತುರುವೇಕೆರೆ, ತುಮಕೂರು ಜಿಲ್ಲೆ ರವರ ಮುಖಾಂತರ)
5) ಗಣಕ ಕೋಶ.
6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.